**ಕಾರ್ಯದರ್ಶಿ**
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಫೆಡರೇಶನ್ ಹೌಸ್, ಎಫ್.ಕೆ.ಸಿ.ಸಿ.ಐ. ಕಟ್ಟಡ
3ನೇ ಮಹಡಿ, ಕೆ.ಜಿ. ರಸ್ತೆ,
ಬೆಂಗಳೂರು-560009
ದೂ.ಸಂ. & ಫ್ಯಾಕ್ಸ್ : 080-22352044
ಇ-ಮೇಲ್ : secretarygadi@karnataka.gov.in
ಅಂತರ್ಜಾಲ : https://kbada.karnataka.gov.in

**SECRETARY**
Karnataka Border Area Development Authority
Federation House, FKCCI-Building,
3rd Floor, K.G. Road
Bengaluru-560009
Fax & Ph : 080-22352044
E-mail: secretarygadi@karnataka.gov.in
Website: https://kbada.karnataka.gov.in


ಪತ್ರ ಸಂ:ಕಗಪ್ರಅಪ್ರಾ/ಆ/2021-22 ದಿನಾಂಕ:28-01-2022

## ಪತ್ರಿಕಾ ಪ್ರಕಟಣೆ,

ಎಲ್ಲಾ ಪತ್ರಿಕಾ / ದೃಶ್ಯ ಮಾಧ್ಯಮ ವರದಿಗಾರರಿಗೆ,

**ವಿಷಯ :-** ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ: KBADA/A/2021-22/10 ದಿನಾಂಕ: 30-7 2021 ರಲ್ಲಿ ಕೋರಿದಂತೆ ಕೇರಳ ರಾಜ್ಯವು ಕನ್ನಡ ಭಾಷಾ ಅಲ್ಪಸಂಖ್ಯಾಂತರ ಬಗ್ಗೆ ಕೇರಳ ಸರ್ಕಾರದ ಸಾಮಾನ್ಯ ಆಡಳಿತ ಇಲಾಖೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ಪತ್ರಿಕಾ ಪ್ರಕಟಣೆ.

******

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ.ಸೋಮಶೇಖರ ಅವರು ಕಾಸರಗೋಡಿನ ಭಾಷಾ ಅಲ್ಪ ಸಂಖ್ಯಾತ ಕನ್ನಡಿಗರಿಗೆ ಕೇರಳದ ವಿವಿಧ ಇಲಾಖೆಗಳಲ್ಲಿ ಒದಗಿಸಬೇಕಾದ ಭಾಷಾ ಭದ್ರತೆ ಬಗ್ಗೆ ಕೇರಳ ಸರ್ಕಾರಕ್ಕೆ ಬರೆದಿದ್ದ ಪತ್ರಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ಕೇರಳ ಸರ್ಕಾರವು ಕೇಂದ್ರದ ಅಲ್ಪ ಸಂಖ್ಯಾತ ಮಂತ್ರಾಲಯದ ಸಹಾಯಕ ಕಮೀಷನರ್ ಅವರಿಗೆ ಪತ್ರವನ್ನು ಬರೆದು ನಮ್ಮ ಪ್ರಾಧಿಕಾರಕ್ಕೆ ಅದರ ಪ್ರತಿ ಕಳುಹಿಸಿದ್ದಾರೆ. ಇದು ನಮ್ಮ ಪ್ರಾಧಿಕಾರದ ಪ್ರಯತ್ನಕ್ಕೆ ಸಂದ ಜಯವಾಗಿದೆ.

ಕೇರಳ ಸರ್ಕಾರದ ಆಡಳಿತ ಇಲಾಖೆಯ ಪತ್ರ ಸಂಖ್ಯೆ: SD2/82/2021-GAD, ದಿನಾಂಕ: 17-01-2022ರ ಪತ್ರದಲ್ಲಿ (ಪ್ರತಿ ಲಗತ್ತಿಸಿದೆ) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಒತ್ತಾಸೆಯಂತೆ ಕಾಸರಗೋಡಿನ ಕನ್ನಡಿಗರ ಸಮಸ್ಯೆಗಳ ಬಗ್ಗೆ ಈ ಕೆಳಕಂಡಂತೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.

1) ಕಾಸರಗೋಡಿನ ಜಿಲ್ಲಾ ಪೊಲೀಸ್ ಮುಖ್ಯಸ್ಥರ ಕಚೇರಿಯಲ್ಲಿ ಕನ್ನಡ ಭಾಷೆ ನಿಭಾಯಿಸುವ ನಿಟ್ಟಿನಲ್ಲಿ ಕನ್ನಡ ಮತ್ತು ಮಲಯಾಳಂ ಬಲ್ಲ ಗುಮಾಸ್ತರನ್ನು ನೇಮಿಸಲಾಗಿದೆ.
2) ಕಾಸರಗೋಡು ಜಿಲ್ಲೆಯ ಕನ್ನಡ ಭಾಷಾ ಅಲ್ಪಸಂಖ್ಯಾತರ ಕುಂದುಕೊರತೆಗಳನ್ನು ನೋಡಿಕೊಳ್ಳಲು ಹೆಚ್ಚುವರಿ ಎಸ್.ಪಿ. ಶ್ರೀ. ಹರಿಶ್ಚಂದ್ರ ನಾಯ್ಕ್ ರವನ್ನು ನೇಮಿಸಲಾಗಿದೆ ಎಂದು ತಿಳಿಸಿರುತ್ತಾರೆ.
3) ಕನ್ನಡ ಮಾತನಾಡುವ ಅಲ್ಪಸಂಖ್ಯಾತರು ವಾಸಿಸುವ ಪ್ರದೇಶಗಳಲ್ಲಿ ಪ್ರತಿ ಪೊಲೀಸ್ ಠಾಣೆಗೆ ಕನ್ನಡ ಭಾಷೆಬಲ್ಲ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಮತ್ತು ಕನ್ನಡ ಭಾಷೆಯಲ್ಲಿ ಬರುವ ದೂರುಗಳನ್ನು ಔಪಚಾರಿಕವಾಗಿ ಪರಿಹರಿಸಲಾಗುತ್ತದೆ ಮತ್ತು ಅಂತಹ ಪೊಲೀಸ್ ಅಧಿಕಾರಿಗಳ ಸೇವೆಯನ್ನು ಭಾಷಾ ಅಲ್ಪಸಂಖ್ಯಾತರ ಸಹಾಯಕ್ಕಾಗಿ ಬಳಸಿಕೊಳ್ಳಲಾಗುತ್ತದೆ ಎಂದು ತಿಳಿಸಿರುತ್ತಾರೆ.
4) ಪೊಲೀಸ್ ಠಾಣೆಗಳ ಸೈನ್ ಬೋರ್ಡ್‌ಗಳಲ್ಲಿ ಪೊಲೀಸ್ ಠಾಣೆಗಳ ಹೆಸರನ್ನು ಕನ್ನಡ ಭಾಷೆಯಲ್ಲಿ ಬರೆಯಲಾಗಿದೆ
5) ಕಾಸರಗೋಡು ಮತ್ತು ಮಂಜೇಶ್ವರ ತಾಲ್ಲೂಕು ವ್ಯಾಪ್ತಿಯಲ್ಲಿ ಮತ್ತು ಕೇರಳದ ಎಲ್ಲಾ ಅಕ್ಷಯ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಕನ್ನಡದಲ್ಲಿ ದರ ಪಟ್ಟಿಯನ್ನು ಪ್ರದರ್ಶಿಸಲು ನಿರ್ದೇಶನಗಳನ್ನು ನೀಡಲಾಗಿದೆ ಎಂದು ತಿಳಿಸಿರುತ್ತಾರೆ.

...2

6) ಇ-ಡಿಸ್ಟ್ರಿಕ್ಟ್ ಪೋರ್ಟಲ್‌ನಲ್ಲಿ ಕನ್ನಡ ಭಾಷೆಯನ್ನು ಸೇರಿಸುವ ಬಗ್ಗೆ ಕೇರಳ ರಾಜ್ಯದ ಐಟಿ ಮಿಷನ್ ನಿರ್ದೇಶಕರಿಗೆ ತಿಳಿಸಲಾಗಿದೆ.

7) ಜಿಲ್ಲಾಧಿಕಾರಿ, ಕಾಸರಗೋಡು ಅವರು ಕರ್ನಾಟಕದ ಗಡಿ ಭಾಗದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಭಾಷೆಯಲ್ಲಿ ಪ್ರವೀಣರಾಗಿರುವ ಶಿಕ್ಷಕರ ಕೊರತೆಯಿದೆ ಎಂದು ವರದಿ ಮಾಡಿದ್ದಾರೆ. ಅಂತಹ ಕಡೆಗಳಲ್ಲಿ ಕನ್ನಡ ಬಾರದ ಶಿಕ್ಷಕರ ನೇಮಕವನ್ನು ಕಟ್ಟುನಿಟ್ಟಾಗಿ ತಪ್ಪಿಸಲಾಗಿದೆ ಎಂದು ಶಿಕ್ಷಣ ಇಲಾಖೆಯ ಉಪನಿರ್ದೇಶಕರು ವರದಿ ನೀಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

8) ಭಾಷಾ ಅಲ್ಪಸಂಖ್ಯಾತರ ಪ್ರದೇಶಗಳಲ್ಲಿನ ಕನ್ನಡ ಮಾಧ್ಯಮ ಶಾಲೆಗಳಲ್ಲಿ, ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ತಮ್ಮ ಮಾತೃಭಾಷೆಯನ್ನು ಕಲಿಯುವುದನ್ನು ನಿರ್ಬಂಧಿಸುವುದಿಲ್ಲ ಅಥವಾ ಮಲಯಾಳವನ್ನು ಕಲಿಯಲು ಒತ್ತಾಯಿಸುವುದಿಲ್ಲ ಮತ್ತು ಅಂತಹ ಆರೋಪಗಳು ಸಂಪೂರ್ಣವಾಗಿ ಆಧಾರರಹಿತವಾಗಿವೆ ಎಂದು ತಿಳಿಸಿರುತ್ತಾರೆ.

9) ಮಲಯಾಳಂ ಭಾಷೆ (ಕಡ್ಡಾಯ ಭಾಷೆ) ಮಸೂದೆ 2017 ಘೋಷಿಸುವ ಸರ್ಕಾರಿ ಆದೇಶದ ಪ್ರಕಾರ ಭಾಷಾ ಅಲ್ಪಸಂಖ್ಯಾತ ಪ್ರದೇಶಗಳಲ್ಲಿನ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಲಯಾಳಂ ಭಾಷೆಯನ್ನೂ ಸಹ ಕಲಿಸಲಾಗುತ್ತಿದೆ ಎಂದು ತಿಳಿಸಲಾಗಿದೆ.

10) ಚಿಕ್ಕ ವಯಸ್ಸಿನಲ್ಲೇ ಕನ್ನಡದ ಜೊತೆಗೆ ಮಲಯಾಳಂ ಕಲಿಯುವುದು ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಕೇರಳ ಸರ್ಕಾರ ನಡೆಸುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಲು ಮತ್ತು ಅವರ ಉದ್ಯೋಗಾವಕಾಶಗಳನ್ನು ಸುಲಭಗೊಳಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿ ಬರೆದಿರುವ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ನಮ್ಮ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿರುವ ಡಾ. ಸಿ.ಸೋಮಶೇಖರ ಅವರು ಕೇಂದ್ರ ಸರ್ಕಾರದ ಅಲ್ಪ ಸಂಖ್ಯಾತ ಮಂತ್ರಾಲಯಕ್ಕೆ ಹಾಗೂ ಕೇರಳ ಸರ್ಕಾರಕ್ಕೆ ಬರೆದ ಪತ್ರಗಳು ಹಾಗೂ ಆ ಬಗ್ಗೆ ಅವರು ಆಗಾಗ್ಗೆ ಕೇರಳ ಸರ್ಕಾರಕ್ಕೆ ಸಂಬಂಧಿಸಿದ ಇಲಾಖೆಗಳನ್ನು ಸಂಪರ್ಕಿಸುತ್ತಿದ್ದ ಪರಿಣಾಮವಾಗಿ ಕೇರಳ ಸರ್ಕಾರವು ಈಗ ಕಾಸರಗೋಡಿನ ಕನ್ನಡಿಗರಿಗೆ ಸಂತೋಷ ಹಾಗೂ ನೆಮ್ಮದಿ ಉಂಟು ಮಾಡುವಂತಹ ಕ್ರಮಗಳನ್ನು ಕೈಗೊಂಡಿದೆ.

ತೆಗೆದುಕೊಂಡ ಕ್ರಮದ ಬಗ್ಗೆ ಕೇರಳ ಸರ್ಕಾರವು ತಕ್ಷಣ ಪ್ರತಿಕ್ರಿಯೆ ನೀಡಿ ಕೂಡಲೇ ಸ್ಪಂದಿಸಿದಕ್ಕೆ ಪ್ರಾಧಿಕಾರವು ಅಭಿನಂದನೆಯನ್ನು ತಿಳಿಸುತ್ತದೆ ಹಾಗೂ ಕಾಸರಗೋಡಿನ ಕನ್ನಡಿಗರಿಗೆ ಸಿಕ್ಕ ಜಯವಾಗಿದೆ.

ಸದರಿ ವಿಷಯವನ್ನು ಎಲ್ಲಾ ದಿನಪತ್ರಿಕೆ / ದೃಶ್ಯ ಮಾಧ್ಯಮಗಳಲ್ಲಿ ಪ್ರಕಟಿಸಲು ತಮ್ಮನ್ನು ಕೋರುವಂತೆ ಅಧ್ಯಕ್ಷರಿಂದ ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

28/1/2022

(ಪ್ರಕಾಶ್ ಮತ್ತೀಹಳ್ಳಿ)
ಕಾರ್ಯದರ್ಶಿ

ಗೆ:

ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು- ಇವರಿಗೆ ಎಲ್ಲಾ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕೋರಿದೆ,

**GOVERNMENT OF KERALA**

**General Administration (Services-D) Department**

No. SD2/82/2021-GAD 17/01/2022,Thiruvananthapuram

From

The Principal Secretary to Government

To

The Assistant Commissioner of Linguistic Minorities
Ministry of Minority Affairs,
Government of India, Southern Zone,
Rajaji Bhavan, E-Wing,
'B' Block, II Floor,
Besant Nagar, Chennai-600090

Sir,

Sub: GAD - Implementation of safeguards of Kannada linguistic minorities in Kasaragod district - reg.

Ref: (1) Letter No. 5/3/2021-130 from the Assistant Commissioner of Linguistic Minorities dated 19/07/2021 enclosing the e-mail representation by Sri. Subramanya B N dated 16/07/2021.

(2) Letter No. KBADA/A/2021-22/10 from the Dr. C. Somasekhara IAS (r), Chairman, Karnataka Border Area Development Authority, Govt. of Karnataka dated 30/07/2021.

(3) Letter No. KDA/C/995/2021 from the Sri. T.S. Nagabharana, Chairman, Kannada Development Authority, Govt. of Karnataka dated 17/08/2021.

(4) Letter No. DCKSGD/6748/2021-M2 from the District Collector, Kasaragod, dated 04/12/2021.

I am directed to invite your attention to the reference cited.As per letter under reference 4th cited, the District Collector Kasaragod has reported that as per the Government order for usage of Malayalam language for official purposes, Malayalam language is mostly used in Kasaragod district offices. It is also reported that a Kannada and Malayalam knowing clerk has been appointed in the Office of the District Police Chief, in order to deal with Kannada language. The grievances of Kannada linguistic minorities in Kasaragod district are being resolved through Additional SP, Sri. Harishchandra Naik. It is also informed that a Kannada-speaking

28/1/2022

police officer has been posted at each police station in the areas where the Kannada-speaking minorities reside, and complaints received in the Kannada language are formally resolved and the service of such police officers are utilised for helping the linguistic minorities. It is also reported that in the sign boards of police stations, name of the police stations are written in Kannada language and directions have been issued to display the rate chart in Kannada for public at all Akshaya Centers in Kasaragod and Manjeswaram Taluk limits and the Kerala State IT Mission Director will be informed about the inclusion of Kannada language in the e-District Portal.

The District Collector, Kasaragod has also reported that there is a shortage of teachers who are proficient in Kannada language, in Kannada medium schools in the areas bordering Karnataka. It is informed that the Deputy Director of Education has reported that appointment of teachers who do not know Kannada are strictly avoided in such areas. It has also been reported that in Kannada medium schools in linguistic minority areas, linguistic minority students are neither barred from learning their mother tongue nor forced to learn Malayalam and such allegations are completely baseless. It is also informed that Malayalam language is also being taught in Kannada medium schools in linguistic minority areas as per the Government Order declaring Malayalam Language (Compulsory Language) Bill 2017. Learning Malayalam along with Kannada at an early age helps the students in the linguistic minority areas to take part in various competitive examinations conducted by the Government of Kerala and to facilitate their job opportunities.

Yours Faithfully,
B R Yamuna
2021Special Secretary
For Principal Secretary to Government.

Approved for Issue,

Section Officer.

Copy to :

**Dr. C. Somasekhara IAS (r)**, Chairman, Karnataka Border Area Development Authority, Govt. of Karnataka, Federation House, F.K.C.C.I. Building, 3rd Floor, K.G. Road, Bengaluru-560009.